ಕರ್ನಾಟಕ ಸರ್ಕಾರ

ಸಮಗ್ರ ಮಕ್ಕಳ ರಕ್ಷಣಾ ಯೋಜನೆ

ಸಂ.ಕೆಎಸ್‌ಐಸಿಪಿಎಸ್/ಕೋವಿಡ್–19/2020–21

ನಿರ್ದೇಶನಾಲಯ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು, ದಿನಾಂಕ:12.04.2020

ಶ್ರೀ ವಿ.ಜಿ. ಭಾನುಪ್ರಕಾಶ್,
ಸರ್ಕಾರಿ ವಕೀಲರು,
ಉಚ್ಛನ್ಯಾಯಾಲಯ,
ಬೆಂಗಳೂರು,
ಕರ್ನಾಟಕ.

ಮಾನ್ಯರೇ,

ವಿಷಯ: ಮಾನ್ಯ ಉಚ್ಛ ನ್ಯಾಯಾಲಯದ ರಿಟ್ ಅರ್ಜಿ ಸಂ.6680/2020(GM-RES)ರಲ್ಲಿ ದಿನಾಂಕ:7.04.2020ರಂದು ಮಾಡಿರುವ ಆದೇಶ ಕುರಿತು.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ತಮ್ಮ ಗಮನಕ್ಕೆ ತರಲಿಚ್ಛಿಸುವುದೇನೆಂದರೆ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ರಿಟ್ ಅರ್ಜಿ ಸಂ.6680/2020ರಲ್ಲಿ ದಿನಾಂಕ:07.04.2020ರಂದು ಮಾಡಿರುವ ಆದೇಶದ ಪ್ರತಿ ಪಡೆದು ಪರಿಶೀಲಿಸಲಾಗಿ, ಆದೇಶದ ಶೀರ್ಷಿಕೆಯಲ್ಲಿ(Cause Title) ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಬಾಲಕಿಯ ಹೆಸರು ಮತ್ತು ಪೂರ್ಣ ವಿಳಾಸವನ್ನು ನಮೂದಿಸಲಾಗಿದೆ.

ಪಾಲನೆ ಮತ್ತು ಸಂರಕ್ಷಣೆ ಅವಶ್ಯವಿರುವ ಮಕ್ಕಳ ವ್ಯಾಖ್ಯಾನದಲ್ಲಿ ಲೈಂಗಿಕ ಶೋಷಣೆಗೆ ಒಳಪಟ್ಟ ಮಕ್ಕಳು ಒಳಗೊಂಡಿರುತ್ತಾರೆ. ಬಾಲನ್ಯಾಯ(ಮಕ್ಕಳ ಪಾಲನೆ ಮತ್ತು ಸಂರಕ್ಷಣೆ) ಅಧಿನಿಯಮ 2015 ಕಲಂ 74ರ ಪ್ರಕಾರ ಹಾಗೂ POCSO ಕಾಯ್ದೆ 2012ರ ಕಲಂ 23ರ ಪ್ರಕಾರ ಪಾಲನೆ ಮತ್ತು ಪೋಷಣೆ ಅಗತ್ಯವಿರುವ, ಲೈಂಗಿಕ ದೌರ್ಜನ್ಯಕ್ಕೆ ಒಳಗಾದ, ಕಾನೂನಿನ ಸಂಘರ್ಷಕ್ಕೆ ಒಳಗಾದ ಮಕ್ಕಳ ಗುರುತಿಸುವಿಕೆಯನ್ನು ಬಹಿರಂಗಪಡಿಸುವ ಯಾವುದೇ ಮಾಹಿತಿಯನ್ನು (ಹೆಸರು, ವಿಳಾಸ, ಭಾವಚಿತ್ರ ಇತ್ಯಾದಿ) ಎಲ್ಲಿಯೂ ಸಹ ಬಹಿರಂಗವಾಗಿ ಪ್ರಕಟಿಸುವಂತಿಲ್ಲ.

ಈ ಕಾರಣಕ್ಕಾಗಿ ಮಾನ್ಯ ಉಚ್ಛ ನ್ಯಾಯಾಲಯ ಇಂತಹದ್ದೇ 2 ಪ್ರಕರಣಗಳು ಅಂದರೆ ರಿಟ್ ಅರ್ಜಿ ಸಂ.10358/2019 ಮತ್ತು 375/2019ರಲ್ಲಿ ಮಾಡಿರುವ ಆದೇಶಗಳಲ್ಲಿ ಕೂಡ ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಕ್ಕಳ ಹೆಸರು, ವಿಳಾಸವನ್ನು ನಮೂದಿಸಿರುವುದಿಲ್ಲ(ಪ್ರತಿ ಲಗತ್ತಿಸಿದೆ).

ಮಾನ್ಯ ಸರ್ವೋಚ್ಛ ನ್ಯಾಯಾಲಯವು ಅನೇಕ ಪ್ರಕರಣಗಳಲ್ಲಿ ನೀಡಿದ ನಿರ್ದೇಶನದ ಪ್ರಕಾರ ಅತ್ಯಾಚಾರ/ಲೈಂಗಿಕ ದೌರ್ಜನ್ಯಕ್ಕೊಳಪಟ್ಟ ಮಹಿಳೆಯರ/ಮಕ್ಕಳ ಹೆಸರು, ವಿಳಾಸ ಇತ್ಯಾದಿ ನ್ಯಾಯಾಲಯದ ತೀರ್ಪು/ಆದೇಶದಲ್ಲಿ ಕೂಡ ನಮೂದಿಸುವಂತಿಲ್ಲ. ಈ ಬಗ್ಗೆ ಭಾರತ ದಂಡ ಸಂಹಿತೆ ಕಲಂ 228ಎ ರಡಿ ಕೂಡ ನಿರ್ಬಂಧ ವಿಧಿಸಲಾಗಿರುತ್ತದೆ.

ಆದರೆ ಪ್ರಸ್ತುತ ರಿಟ್ ಅರ್ಜಿ ಸಂ.6680/2020ರಲ್ಲಿ ದಿನಾಂಕ:07.04.2020ರ ಆದೇಶದ ಶೀರ್ಷಿಕೆಯಲ್ಲಿ(Cause Title) ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಬಾಲಕಿಯ ಹೆಸರು ಮತ್ತು ಪೂರ್ಣ ವಿಳಾಸವನ್ನು ನಮೂದಿಸಲಾಗಿದೆ. ಮೇಲೆ ವಿವರಿಸಿದ ವಾಸ್ತವಾಂಶಗಳ ಹಿನ್ನೆಲೆಯಲ್ಲಿ ಈ ವಿಷಯವು ಸಾಮಾಜಿಕ ಸಂವಹನಗಳಲ್ಲಿ ಚರ್ಚೆಗೆ ಗ್ರಾಸವಾಗಿದೆ. ಈ ಹಿನ್ನೆಲೆಯಲ್ಲಿ ಮೇಲೆ ತಿಳಿಸಿದ ಅಂಶಗಳನ್ನು ಮುಂದಿನ ಅವಶ್ಯಕ ಕ್ರಮಕ್ಕಾಗಿ ಮಾನ್ಯ ಉಚ್ಛ ನ್ಯಾಯಾಲಯದ ದಯಾಪರ ಗಮನಕ್ಕೆ ತರುವಂತೆ ಈ ಮೂಲಕ ತಮ್ಮನ್ನು ಕೋರಲಾಗಿದೆ.

ತಮ್ಮ ವಿಶ್ವಾಸಿ,

13.04.2020

ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ.

REDMI NOTE 8
AI QUAD CAMERA